

# ಬೆರಗು, ಬೆಡಗು, ಬಹುತ್ವ!

■ ಶಶಿಕುಮಾರ್ ಸಿ.

'ಬನಾರಸ್'ನಲ್ಲಿ ಜೈದ್ ಖಾನ್ ಮತ್ತು ಸೋನಲ್ ಮೊಂತೆರಿಯೊ

**ಜಯತೀರ್ಥ ನಿರ್ದೇಶನದ 'ಬನಾರಸ್' ನ. 4ರಂದು ತೆರೆಕಾಣುತ್ತಿದೆ. ಧಾರ್ಮಿಕ ಮಹತ್ವದ ಸ್ಥಳದ ಹಿನ್ನೆಲೆಯಲ್ಲಿ ನವಿರು ಪ್ರೇಮಕಥೆಯೊಂದರ ನಿರೂಪಣೆ ಈ 'ಬನಾರಸ್'. ಈ ಚಿತ್ರದ ನಾಯಕನಟ ಜೈದ್ ಖಾನ್ ಅವರದು, ತಮ್ಮ ಚೊಚ್ಚಲ ಸಿನಿಮಾದ ಬಗ್ಗೆ ಎಷ್ಟು ಮಾತನಾಡಿದರೂ ದಣಿವರಿಯದ ಉತ್ಸಾಹ.**

'ಬನಾರಸ್ – ಇದೊಂದು ಪ್ರೇಮಕಥೆ. ಮರವೊಂದರ ಹಲವು ಕವಲುಗಳಂತೆ ಬನಾರಸ್ ಸಹ ಹಲವಾರು ಶೇಡ್‌ಗಳನ್ನು ಒಳಗೊಂಡಿದೆ. ಕಾಮಿಡಿ, ಆ್ಯಕ್ಷನ್, ಸಸ್ಪೆನ್ಸ್, ಥ್ರಿಲ್ಲಿಂಗ್ ಕಥಾಹಂದರದ ಎಳೆಯನ್ನು ಒಳಗೊಂಡಿದೆ. ಸಿನಿಮಾದಲ್ಲೊಂದು ವಿಶೇಷ ಪ್ರಯೋಗವೂ ಇದೆ. ನಾನು ಈ ಸಿನಿಮಾ ಮಾಡಲು ಮುಖ್ಯ ಕಾರಣ ಆ ಪ್ರಯೋಗವೇ. ಚಿತ್ರಮಂದಿರಕ್ಕೆ ಧಾವಿಸುವ ಅಭಿಮಾನಿ ದೇವರುಗಳಿಗದು ಸರ್‌ಪ್ರೈಸ್!'

ನಟ ಜೈದ್ ಖಾನ್ ತಮ್ಮ ನಟನೆಯ ಚೊಚ್ಚಲ ಸಿನಿಮಾದ ಬಗ್ಗೆ ಹೇಳುವ ಮಾತುಗಳಿವು. ಜೈದ್, ರಾಜಕಾರಣಿ ಹಾಗೂ ಉದ್ಯಮಿ ಜಮೀರ್ ಅಹ್ಮದ್‌ಖಾನ್ ಅವರ ಪುತ್ರ. ನಟನೆಯ ಚೊಚ್ಚಲ ಸಿನಿಮಾ ತೆರೆಕಾಣುತ್ತಿರುವ ಸಂದರ್ಭದಲ್ಲಿ 'ಸುಧಾ' ಜೊತೆ ಮಾತನಾಡಿದ ಅವರು, ಚಿತ್ರರಂಗದ ಕುರಿತ ತಮ್ಮ ದೊಡ್ಡ ದೊಡ್ಡ ಕನಸುಗಳನ್ನು ಹಂಚಿಕೊಂಡರು.

'ಬನಾರಸ್ ಪ್ರತಿಯೊಬ್ಬರು ನೋಡಬೇಕಾದ ಜಾಗ. ಬನಾರಸ್ ವೈಭವವನ್ನು ಕಣ್ತುಂಬಿಕೊಳ್ಳುವುದು ವಿಶೇಷವಾಗಿ ನನ್ನ 'ಹಿಂದೂ ಬ್ರದರ್ಸ್'ಗೆ ಹೆಮ್ಮೆಯ ವಿಚಾರ. ಪ್ರೇಮಕಥೆಯೊಂದರ ಮೂಲಕ ಬನಾರಸ್ ಅನ್ನು ಬಹುಮುಖಿಯಾಗಿಯೂ ತೋರಿಸಿದ್ದೇವೆ. ಬಹುತ್ವ ಭಾರತದ ನೆಲೆಯಲ್ಲಿ ನೋಡಿದರೆ, ಇದು ಬಹುತ್ವದ ಬನಾರಸ್ ಆಗಿಯೇ ಕಾಣುತ್ತದೆ. ಹೀಗಾಗಿ ಆ ಜಾಗಕ್ಕೆ ವಿಶೇಷ ಒತ್ತು ನೀಡಿ ಸುಂದರವಾಗಿ ತೋರಿಸಿದ್ದೇವೆ. ನಾವು ತೋರಿಸಿರುವಷ್ಟು ಸುಂದರವಾಗಿ ಯಾರೂ ಈ ಜಾಗವನ್ನು ಈ ಮೊದಲು ತೋರಿಸಿಲ್ಲ' ಎಂದು ಹೇಳುವಾಗ ಜೈದ್ ಅವರ ಮಾತುಗಳಲ್ಲಿ ಆತ್ಮವಿಶ್ವಾಸ ಇಣುಕುತ್ತಿತ್ತು.

'ಟೂರಿಸ್ಟ್ ಏಜೆನ್ಸಿಗಳ ಮೂಲಕ ಬನಾರಸ್‌ಗೆ ಹೋಗುವವರು ಹೆಚ್ಚು. ಏಜೆನ್ಸಿಯವರು ಕೆಲವೇ ಜಾಗಗಳಲ್ಲಿ ಸುತ್ತಾಡಿಸಿ ವಾಪಸ್ ಕರೆದುಕೊಂಡು ಬರುವುದರಿಂದ, ಬನಾರಸ್‌ನ ಸಾಕಷ್ಟು ಸ್ಥಳಗಳನ್ನು ಪ್ರವಾಸಿಗರು ಮಿಸ್ ಮಾಡಿಕೊಳ್ಳುತ್ತಾರೆ. ಹಾಗೆ ಮಿಸ್ ಮಾಡಿಕೊಂಡ ಎಷ್ಟೋ ಜಾಗಗಳನ್ನು ನಾವು ಸಿನಿಮಾದಲ್ಲಿ ತೋರಿಸಿದ್ದೇವೆ. ಚಿತ್ರಮಂದಿರದಿಂದ ಹೊರಬಂದ ಪ್ರೇಕ್ಷಕರು ಬನಾರಸ್‌ಗೆ ಒಮ್ಮೆಯಾದರೂ ಹೋಗಿಬರಬೇಕು ಅನಿಸುವಂತೆ ನಮ್ಮ ಸಿನಿಮಾ ಮಾಡುತ್ತದೆ'.

ತಮ್ಮ ಸಿನಿಮಾದ ಬಗ್ಗೆ ಆತ್ಮವಿಶ್ವಾಸ ಹಾಗೂ ಭಾವುಕತೆಯಿಂದ ಮಾತನಾಡಿದರೂ, 'ಬಾಯ್ಕಾಟ್ ಬನಾರಸ್' ಎಂಬ ಸವಾಲು ತಮ್ಮ ಮುಂದೆ ಇರುವುದರ ಅರಿವು ಜೈದ್ ಅವರಿಗಿದೆ. ನೆಗೆಟಿವ್ ಕ್ಯಾಂಪೇನ್‌ಗಳಿಗೆ, ಅಪಪ್ರಚಾರ ಮಾಡುತ್ತಿರುವವರಿಗೆ ನನ್ನ ಸಿನಿಮಾವೇ ಉತ್ತರಿಸುತ್ತದೆ ಎನ್ನುವುದು ಅವರ ಉತ್ತರ.

'ಸಿನಿಮಾದ ವಿರುದ್ಧವಾಗಿ ಕ್ಯಾಂಪೇನ್ ಮಾಡುವವರು ಮಾಡಿಕೊಳ್ಳಲಿ. ಅದಕ್ಕೆಲ್ಲ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಸಿನಿಮಾ ನೋಡಬೇಕೋ ಬೇಡವೋ ಅನ್ನೋದನ್ನು ನಿರ್ಧರಿಸುವವರು ಪ್ರೇಕ್ಷಕರೇ ಹೊರತು, ಕ್ಯಾಂಪೇನ್ ಮಾಡುವವರಲ್ಲ' ಎನ್ನುವ ಅವರಿಗೆ, ಸಿನಿಮಾದ ಹಾಡುಗಳು ಹಾಗೂ ಟ್ರೇಲರ್ ಚಿತ್ರರಸಿಕರಿಗೆ ಇಷ್ಟವಾಗಿರುವುದು ಖುಷಿ ತಂದಿದೆ.

## 'ಟೆಂಪಲ್ ರನ್' ಕೌಂಟರ್ ಅಲ್ಲ!

'ಬಾಯ್ಕಾಟ್ ಬನಾರಸ್' ಕ್ಯಾಂಪೇನ್ ಆರಂಭವಾದ ಬಳಿಕ ಜೈದ್ ಖಾನ್ ಕೆಲವು ಪ್ರಮುಖ ಹಿಂದೂ ದೇವಸ್ಥಾನಗಳಿಗೆ

